**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

ಸಂಖ್ಯೆ: ಡಿಟಿಇ 29 ಡಿಇಕ್ಯೂ(1) 2011 ದಿ: 19-07-2013

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

ವಿಷಯ: **ಶ್ರೀ ಟಿ.ಬಾಬು, ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರ ಅನಧಿಕೃತ ಗೈರು ಹಾಜರಿ ಕುರಿತು ಅಂತಿಮ ಆದೇಶ ಹೊರಡಿಸುವ ಬಗ್ಗೆ.**

ಓದಲಾಗಿದೆ:

1. **ಪ್ರಿನ್ಸಿಪಾಲರು ಶ್ರೀ ಟಿ.ಬಾಬು ಇವರಿಗೆ ಜಾರಿ ಮಾಡಲಾದ ತಿಳುವಳಿಕೆ ಪತ್ರ ದಿನಾಂಕ: 7.12.2010, 16.11.2010, 27.10.2010, 22.3.2011, 21.4.2011,**
2. **ಪ್ರಿನ್ಸಿಪಾಲರು ನಿರ್ದೇಶಕರಿಗೆ ಬರೆದ ಪತ್ರ ದಿ: 12.1.2011, 4.5.2011, 20.9.2011, 21.12.2011, 2.3.2012, 8.3.2012, 2.7.2012 ಮತ್ತು 15.5.2012.**
3. **ನಿರ್ದೇಶಕರಿಂದ ಕಾರಣ ಕೇಳುವ ನೋಟೀಸ್ ದಿನಾಂಕ: 2.3.2012**
4. **ದೋಷಾರೋಪಣ ಪಟ್ಟಿ ದಿನಾಂಕ: 19.4.2012.**
5. **ವಿಚಾರಣಾಧಿಕಾರಿಗಳ ನೇಮಕಾತಿ ದಿನಾಂಕ: 1.6.2012**
6. **ವಿಚಾರಣಾಧಿಕಾರಿಗಳು ಅಂತಿಮ ವರದಿ ಸಲ್ಲಿಸಿದ ದಿನಾಂಕ: 27.9.2012.**
7. **ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ: 7.10.2012.**
8. **ಶ್ರೀ ಟಿ.ಬಾಬು ಇವರ ಸಮಜಾಯಿಷಿ ದಿನಾಂಕ: 14.12.2012.**

**********

**ಪ್ರಸ್ತಾವನೆ;**

ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಟಿ.ಬಾಬು, ದ್ವಿತೀಯ ದರ್ಜೆ ಸಹಾಯಕರು, ಇವರು ದಿ: 4.10.2010ರಿಂದ 31.10.2010ರವರೆಗೆ, ನವೆಂಬರ್ 2010ರಿಂದ ಏಪ್ರಿಲ್ 2011ರವರೆಗೆ ಹಾಗೂ 4.10.2011ರಿಂದ ಇಲ್ಲಿಯವರೆಗೂ ದೀರ್ಘಾವಧಿ ಅನಧಿಕೃತ ಗೈರು ಹಾಜರಾದ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಬರೆದ ಪತ್ರದ ಅನುಸಾರ ಸದರಿಯವರಿಗೆ ಇಲಾಖಾ ವತಿಯಿಂದ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿ, ಕಾರಣ ಕೇಳುವ ನೋಟೀಸಿಗೆ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಅನಂತರ ಸಮ ಸಂಖ್ಯೆ ದಿ: 19.04.2012ರ ನೋಟೀಸ್ ನಲ್ಲಿ ದೋಷಾರೋಪಣ ಪಟ್ಟಿ ಜಾರಿಗೊಳಿಸಲಾಗಿತ್ತು. ಆದರೆ ಸದರಿಯವರು ಯಾವುದೇ ಸಮಜಾಯಿಷಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಶಿಸ್ತು ಪ್ರಾಧಿಕಾರವು ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಡತೆ (ವರ್ತನೆ) ನಿಯಮಗಳು 1966ರ ಸಾಮಾನ್ಯ ನಿಯಮ 1) (i), (ii), (iii) ನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಅನಧಿಕೃತ ಗೈರು ಹಾಜರಿಯ ಅವಧಿಗೆ ಪೂರ್ಣಾವಧಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ನ್ಯಾಯಮೂರ್ತಿ, ಶ್ರೀ ಎಂ.ಜಿ. ಹಿರೇಮಠ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಯಿತು. ಅದರಂತೆ ವಿಚಾರಣಾಧಿಕಾರಿಗಳು ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸಿ ದಿನಾಂಕ: 27.9.2012 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಆರೋಪಿತರ ವಿರುದ್ಧ ಆರೋಪಗಳ ಕುರಿತು ಸಾಕ್ಷ್ಯ ಮತ್ತು ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವರದಿಯಲ್ಲಿ ವಿಶ್ಲೇಷಿಸಿರುವ ಸಾರಾಂಶ ಈ ಮುಂದಿನಂತಿದೆ.

ಆಪಾದಿತರು ಅವರ ವಿರುದ್ಧ ಮಾಡಿದ ಆರೋಪವನ್ನು ಒಪ್ಪಿಕೊಂಡಿದ್ದರಿಂದ ಮಂಡನಾಧಿಕಾರಿಗಳು ಆರೂಪವನ್ನು ಸಾಬೀತು ಪಡಿಸಲು ಯಾವುದೇ ಸಾಕ್ಷಿಧಾರರನ್ನು ವಿಚಾರಿಸಿರುವುದಿಲ್ಲ ಮತ್ತು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಮಂಡನಾಧಿಕಾರಿಗಳು ಆರೋಪ ಸಾಬೀತಾಗಿದೆಯೆಂದು ವರದಿ ಸಲ್ಲಿಸಲು ಕೋರಿರುತ್ತಾರೆ. ಆಪಾದಿತರು ಸಹ ತಮ್ಮ ಲಿಖಿತ ಪ್ರತಿವಾದವನ್ನು ಸಲ್ಲಿಸಿ ಮೌಖಿಕ ವಾದ ಮಂಡಿಸಿದರು.

.........2

ಆಪಾದಿತರ ವಿರುದ್ಧ ಮಾಡಿದ ಆರೋಪವನ್ನು ಗಮನಿಸಲಾಗಿ ಆಪಾದಿತರು ಪೂರ್ವಾನುಮತಿ ಪಡೆಯದೆ ದಿ: 04.10.2010ರಿಮದ 31.10.2010ರ ವರೆಗೆ ಹಾಗೂ ನವಂಬರ್ 2010 ರಿಂದ ಏಪ್ರಿಲ್ 2011 ರವರೆಗೆ ಮತ್ತು 04.10.2011ರಿಂದ ಇದುವರೆಗೂ ದೀರ್ಘಾವಧಿ ಅನಧಿಕೃತ ಗೈರು ಹಾಜರಾಗಿದ್ದು ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯನ್ನುಂಟುಮಾಡಿದ್ದರಿಂದ ಆಪಾದಿತರು ಗಂಭೀರ ಸ್ವರೂಪವಾದ ಆರೋಪವನ್ನು ಎಸಗಿದ್ದು ಕಂಡುಬರುತ್ತದೆ. ಆಪಾದಿತರು ದಿ: 04.10.2011ರಿಂದ 16.01.2012ರ ವರೆಗೆ Viral Fever and Jaundice ಖಾಯಿಲೆಯಿಂದ ಬಳಲುತ್ತಿದ್ದರೆಂದು ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿರುತ್ತಾರೆ. ಆದರೆ ಸದರಿ ವೈದ್ಯಕೀಯ ಪ್ರಮಾಣ ಪತ್ರಕ್ಕೆ ಮೇಲು ರುಜು ಆಗಲಾರದ ಕಾರಣ ಅದನ್ನು ಒಪ್ಪುವುದು ಸಾಧ್ಯವಿಲ್ಲ. ದಿ: 04.10.2010ರಿಂದ 31.10.2010ರ ವರೆಗೆ ಗೈರು ಹಾಜರಾತಿ ಬಗ್ಗೆ ಯಾವುದೇ ವೈದ್ಯಕೀಯ ಪ್ರಮಾಣ ಪತ್ರಗಳನ್ನಾಗಲೀ ಹಾಗೂ ಬೇರೆ ಇನ್ನೇನಾದರೂ ಮಹತ್ವದ ದಾಖಲೆಗಳನ್ನಾಗಲೀ ಹಾಜರುಪಡಿಸಿಲ್ಲವಾದ್ದರಿಂದ ಅವರು ಉದ್ದೇಶ ಪೂರ್ವಕವಾಗಿ ಪೂರ್ವಾನುಮತಿ ಪಡೆಯದೆ 28 ದಿನಗಳು ಗೈರುಹಾಜರಾಗಿರುತ್ತಾರೆ. ಒಟ್ಟಾರೆ ಸುಮಾರು 17 ತಿಂಗಳು 28 ದಿನಗಳ ಕಾಲ ದೀರ್ಘಾವಧಿ ಅನಧಿಕೃತ ಗೈರುಹಾಜರಾಗಿರುತ್ತಾರೆ. ಆಪಾದಿತರ ಕಡತವನ್ನು ಪರಿಶೀಲಿಸಲಾಗಿ ಆಪಾದಿತರು ಸರ್ವೇಸಾಮಾನ್ಯವಾಗಿ ಆಗಾಗ್ಗ ಅನಧಿಕೃತ ಗೈರು ಹಾಜರಾಗಿರುವುದು ಕಂಡುಬರುತ್ತದೆ. ಆದ್ದರಿಂದ ಆಪಾದಿತರು ಕಠಿಣ ಶಿಕ್ಷೆಗೆ ಅರ್ಹರಾಗಿರುತ್ತಾರೆ.

ಆಪಾದಿತರು ಅವರ ವಿರುದ್ಧ ಮಾಡಿದ ಆರೋಪವನ್ನು ತಮ್ಮ ಪ್ರಾರಂಭಿಕ ಹೇಳಿಕೆಯಲ್ಲಿ ಒಪ್ಪಿಕೊಂಡಿರುವುದರಿಂದ ಅವರ ವಿರುದ್ಧ ಮಾಡಿದ ಆರೋಪವು ಸಾಬೀತಾಗಿರುತ್ತದೆ ಎಂದು ನಿರ್ಧರಿಸಿ ಈ ಮುಖ್ಯಾಂಶವನ್ನು ಸಕಾರಾತ್ಮಕವಾಗಿ ನಿರ್ಣಯಿಸಿ ಈ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ವರದಿಯಲ್ಲಿ ಉಲ್ಲೇಖಿಸಿರುತ್ತಾರೆ.

ಈ ಪ್ರಕರಣದಲ್ಲಿ ಆರೋಪಿತರಿಂದ ದುರ್ನಡತೆ ಎಸಗಲ್ಪಟ್ಟಿರುವುದನ್ನು ಯಾವುದೇ ಸಂದೇಹಕ್ಕೆ ಆಸ್ಪದ ಇಲ್ಲದಂತೆ ಖಚಿತಪಡಿಸಿದೆ. ಈ ಅಂಶಗಳನ್ನು ಸಮರ್ಥವಾಗಿ ಅಲ್ಲಗಳೆಯುವಂತಹ ಯಾವುದೇ ಮೌಖಿಕ ಅಂಶಗಳನ್ನು ಸಹ ಆರೋಪಿತರು ನಿರೂಪಿಸಿರುವುದಿಲ್ಲ. ವಿಚಾರಣೆಯು ಸಮರ್ಪಕವಾಗಿ ನಡೆದು ಆರೋಪಿತರಿಗೆ ತಮ್ಮ ವಾದವನ್ನು ಮಂಡಿಸಲು ವಿಫುಲ ಅವಕಾಶವನ್ನು ನಿಸಲಾಗಿದೆ. ಈ ಕ್ಛಛೇರಿಯ ಎರಡನೇ ಕಾರಣ ಕೇಳುವ ನೋಟಿಸ್ ಸಂ: ಡಿಟಿಇ 29 ಡಿಇಕ್ಯೂ(1)2011, ದಿ:07.10.2012ರಲ್ಲಿ ವಿಛ್ಚರಣಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಲಗ್ತತ್ತಿಸಿ, ಸದರಿಯವರ ವಿರುದ್ಧ ಹೊರಿಸಲಾದ ಆರೋಪವು ಸಾಬೀತಾಗಿದೆಯೆಂದು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿ ಏಕೆ ಸೂಕ್ತ ದಂಡನೆ ವಿಧಿಸಬಾರದು ಎಂಬುದರ ಬಗ್ಗೆ ನೋಟಿಸ್ ತಲುಪಿದ 30 ದಿವಸಗಳೊಳಗಾಗಿ ಲಿಖಿತ ಸಮ್ಮಜಾಯಿಷಿ ಸಲ್ಲಿಸಲು ತಿಳಿಸಲಾಗಿತ್ತು.

ಆದರೆ ಸದರಿ 2ನೇ ಕಾರಣ ಕೇಳುವ ನೋಟಿಸನ್ನು ಸ್ವೀಕರಿಸಿ, ದಿನಾಂಕ:14.12.2012ರಂದು ಸಮ್ಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಸಮ್ಮಜಾಯಿಷಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಶ್ರೀ ಟಿ.ಬಾಬು ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ಹಾಗೂ ಪುಷ್ಠೀಕರಿಸುವಂತಹ ಯಾವುದೇ ಕ್ಛರಣಗಳನ್ನು ಅಥವಾ ದಾಖಲೆಗಳನ್ನಾಗಲೀ ಸಲ್ಲಿಸಿರುವುದಿಲ್ಲ ಹಾಗೂ ಸದರಿಯವರ ಸೇವಾವದಿಯನ್ನು ಗಮನಿಸಲಾಗಿ ಈ ಹಿಂದೆಯೂ ಸಹ ಹಲವಾರು ಬಾರಿ ಗೈರು ಹಾಜರಾದ ಹಿನ್ನಲೆಯಲ್ಲಿ ಪ್ರಿನ್ಸಿಪಾಲರ ಹಚಿತದಲ್ಲಿ ಜ್ಞಾಪನಗಳನ್ನು ಜಾರಿಮಾಡಲಾಗಿದ್ದರೂ ಸಹ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ. ಮತ್ತು ಇವರು ಅನಧಿಕೃತ ಗೈರು ಹಾಜರಿಯ ಹವ್ಯಾಸವನ್ನೇ ಬಳಸಿಕೊಂಡಿರುವ್ವದರಿಂದ ಆರೋಪಿತರು ಸಲ್ಲಿಸಿದ ಸಮ್ಮಜಾಯಿಷಿಯನ್ನು ಒಪ್ಪದೆ ಅವರ ವಿರುದ್ಧದ ವಿಚಾರಣಾ ವರದಿಯನ್ನು ಅಂಗೀಕರಿಸಿ ವಿಛ್ಚರಣಾಧಿಕಾರಿಗಳ ನಿರ್ಣಯವನ್ನು ಒಪ್ಪಿಕೊಂಡ ಶಿಸ್ತು ಪ್ರಾಧಿಕಾರವು ಈ ಮುಂದಿನಂತೆ ಆದೇಶಿಸುತ್ತದೆ.

........3

**ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ 29 ಡಿಇಕ್ಯೂ(1)2011, ಬೆಂಗಳೂರು**

**ದಿನಾಂಕ: 20 ನೇ ಜುಲೈ 2013** / 1474

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 8(vi) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಟಿ.ಬಾಬು, ದ್ವಿತೀಯ ದರ್ಜೆ ಸಹಾಯಕರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ **ಸರ್ಕಾರಿ ಸೇವೆಯಿಂದ ಈ ಮೂಲಕ ಕಡ್ಡಾಯ ನಿವೃತ್ತಿಗೊಳಿಸಿದೆ.**

ಸದರಿಯವರ ಗೈರು ಹಾಜರಾದ ಅವಧಿಯನ್ನು ಕೆಲಸ ಮಾಡದ ದಿನಗಳೆಂದು (Dies non) ಎಂದು ಪರಿಗಣಿಸಿ ಆದೇಶಿಸಲಾಗಿದೆ.

ನಿರ್ದೇಶಕರು
ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ,

1. ಶ್ರೀ ಟಿ.ಬಾಬು, ಕೇರ್ ಆಫ್ ಶಾಂತಿಮಣಿ, ನಂ.4, ರಮಾಭಾಯಿ ನಗರ, ದೇವರ ಜೀವನ ಹಳ್ಳಿ, ಬೆಂಗಳೂರು-560045.
2. ಶ್ರೀ ಟಿ.ಬಾಬು, ಬಿನ್ ತವಮಣಿ (ಲೇಟ್), ನಂ.151, ನಾರ್ತ್ ಗಿಲ್ಲಿ ಕ್ವಾಟರ್ಸ್ ಬ್ಲಾಕ್, ಮಾರಿಕುಪ್ಪಂ, **ಕೆ.ಜಿ.ಎಫ್**, ಕೋಲಾರ ಜಿಲ್ಲೆ.
3. ಶ್ರೀ ಟಿ.ಬಾಬು, ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ, ಬೆಂಗಳೂರು. (ಪ್ರಿನ್ಸಿಪಾಲರ ಮುಖಾಂತರ)
4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸ ಸೌಧ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
4. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
5. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
6. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ಪ್ರಾಂಶುಪಾಲರು, ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ, ಬೆಂಗಳೂರು ಇವರು ಸದರಿಯವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಲು ಸೂಕ್ತ ಕ್ರಮ ಕೈಗೊಂಡು ವರದಿ ಕಳುಹಿಸುವುದು.
9. ನಿರ್ದೇಶನಾಲಯದ ಆಪ್ತ ಶಾಖೆಗೆ
10. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
11. ~~ಇ~~-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
12. ಇಎಸ್‌ಟಿ(6), ಇಎಸ್‌ಟಿ8(ಬಿ), ಇಎಸ್‌ಟಿ(9) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು